

ದಿಗ್ಗಜರ ಸಂಗೀತವನ್ನು ಕೇಳುತ್ತಲೇ ಬಹಳಷ್ಟು ಕಲಿತ ಇವರು, ಕೇಳ್ಮೆಯಿಂದ ಸಂಗೀತದಲ್ಲಿ ಬೇಗನೆ ಪಕ್ವವಾಗಬಹುದು ಎಂಬುದನ್ನು ಅರಿತು ಪಾಲಿಸುತ್ತಿದ್ದರು ಕೂಡ. ಘಟಾನುಘಟಿ ಕಲಾವಿದರಾಗಿದ್ದ ಉಸ್ತಾದ್ ಮುಷ್ತಾಕ್ ಹುಸೇನ್ ಖಾನ್, ಬಡೇ ಗುಲಾಮ್ ಅಲಿ ಖಾನ್, ಉಸ್ತಾದ್ ಅಮೀರ್ ಖಾನ್, ಪಂ. ಜಸರಾಜ್, ಪಂ. ಭೀಮಸೇನ ಜೋಶಿ, ಪಂ. ರವಿಶಂಕರ್ ಮುಂತಾದವರ ಸಂಗೀತವನ್ನು ಪ್ರತಿನಿತ್ಯ ಕೇಳಿದ್ದರಿಂದಲೇ ತಮ್ಮದೇ ಆದ ಹೊಸ ಗಾಯನ ಶೈಲಿಯನ್ನು ರೂಢಿಸಿಕೊಳ್ಳಲು ಸಾಧ್ಯವಾಯಿತು ಎಂದು ಅವರೇ ಹೇಳಿಕೊಂಡಿದ್ದನ್ನು ಇಲ್ಲಿ ಸ್ಮರಿಸಬಹುದು.

ಸ್ವತಂತ್ರ ಗಾಯನದಲ್ಲಿ ಹೆಸರು ಮಾಡಿದ್ದಲ್ಲದೆ ಜುಗಲಬಂದಿಗಳಲ್ಲೂ ಇವರದು ಎತ್ತಿದ ಕೈ. ಕೋಲ್ಕತ್ತಾದ ಐಟಿಸಿ ಸಂಗೀತ ಕಛೇರಿ, ಮುಂಬಯಿ, ದೆಹಲಿ, ಪುಣೆ ಮುಂತಾದ ಕಡೆಗಳಲ್ಲಿ ಅನೇಕ ಪ್ರತಿಷ್ಠಿತ ವೇದಿಕೆಗಳಲ್ಲಿ ಪಂ. ಭೀಮಸೇನ ಜೋಶಿ, ಉಸ್ತಾದ್ ಶಾಹಿದ್ ಪರ್ವೇಜ್, ಶಂಕರ ಮಹದೇವನ್, ಟಿ.ಎಂ. ಕೃಷ್ಣ, ಬಾಂಬೆ ಜಯಶ್ರೀ ಅವರೊಂದಿಗೆ ನಡೆಸಿಕೊಟ್ಟ ಮಧುರಾತಿಮಧುರ ಜುಗಲಬಂದಿ ಗಾಯನ ಸಹೃದಯರ ಹೃದಯದಲ್ಲಿ ಹೊಸ ಅನುಭೂತಿ ಸೃಷ್ಟಿಸುವಂತಿದ್ದವು.

ಭೀಮಸೇನ ಜೋಶಿ, ಅಮೀರ್ ಖಾನ್ ಅವರ ಗಾಯನ ಎಂದರೆ ಅವರಿಗೆ ಎಲ್ಲಿಲ್ಲದ ಪ್ರೀತಿ. ಇದನ್ನು ಅವರು ಅನೇಕ ವೇದಿಕೆಗಳಲ್ಲಿ ಹೇಳಿದ್ದೂ ಇದೆ. ಒಮ್ಮೆ ಪುಣೆಯಲ್ಲಿ ನಡೆದ ಕಛೇರಿಯೊಂದರಲ್ಲಿ ರಶೀದ್ ಖಾನ್ ಅವರಿಗೆ ಪಂ. ಭೀಮಸೇನ ಜೋಶಿ ಅವರು ಶಾಲು ಹೊದೆಸಿ ಸನ್ಮಾನಿಸಿದ್ದರು. ಕಛೇರಿ ಮುಗಿದ ಮೇಲೆ ಆ ಶಾಲು ಕಳೆದುಹೋಯಿತು. ಇದರಿಂದ ಬಹಳ ನೊಂದ ರಶೀದ್ ಖಾನ್, 'ನಾನು ನನ್ನ ಜೀವನದಲ್ಲಿ ಅತ್ಯಂತ ಮೌಲ್ಯವಾದ ವಸ್ತುವನ್ನು ಕಳೆದುಕೊಂಡೆ' ಎಂದು ಬಹಳ ಬೇಸರಪಟ್ಟುಕೊಂಡಿದ್ದರು.

## ಗಾಯನದಲ್ಲಿನ ತಾಂತ್ರಿಕತೆ

ರಶೀದ್ ಖಾನ್ ಅವರ ಕಛೇರಿಗಳು ಅತ್ಯಂತ ವಿಶಿಷ್ಟವಾಗಿರುತ್ತಿದ್ದವು. ರಾಗಗಳು ನೇರ ಪ್ರಕೃತಿಯದ್ದೇ ಆಗಿರಲಿ, ಕ್ಲಿಷ್ಟಕರ ಎನಿಸುವ ವಕ್ರರಾಗಗಳೇ ಆಗಿರಲಿ, ಅದರಲ್ಲಿ ಬರುವ ಆಕಾರ್ ತಾನ್‌ಗಳು, ಬೋಲ್ ಹಾಗೂ ಸ್ವರ ತಾನ್‌ಗಳ ಪ್ರಸ್ತುತಪಡಿಸುವಿಕೆ ಅತ್ಯದ್ಭುತ. ಸಾಮಾನ್ಯವಾಗಿ ಹಿಂದೂಸ್ತಾನಿ ಸಂಗೀತದಲ್ಲಿ ಕೇಳುಗರು ಇಷ್ಟಪಡುವ ಭಾಗವೇ ತಾನ್‌ಗಳು. ಮಿಂಚಿನ ವೇಗದಲ್ಲಿ ತಾನ್‌ಗಳನ್ನು ಮುಗಿಸಿ 'ಸಂ'ಗೆ ಬರುವ ಅವರ ಚಾಕಚಕ್ಯತೆಯೇ ಅದ್ಭುತ.

ಸುಲಭದ ರಾಗ ಯಮನ್‌ನಂತೆ ಕಷ್ಟಕರ ರಾಗಗಳಾದ ಛಾಯಾನಟ್, ಹಮೀರ್, ಬಿಲಾಸ್‌ಖಾನಿ ತೋಡಿ ಮುಂತಾದ ರಾಗಗಳನ್ನೂ ಸುಲಲಿತವಾಗಿ, ವಿದ್ವತ್‌ಪೂರ್ಣವಾಗಿ ಹಾಡುತ್ತಿದ್ದರು. ಕೆಲವು ಘರಾಣೆಗಳಲ್ಲಿ ಆಕಾರ್ ತಾನ್‌ಗಳಿಗೆ ಹೆಚ್ಚಿನ ಮಹತ್ವ. ಇನ್ನು ಕೆಲವು ಘರಾಣೆಗಳಲ್ಲಿ ಬೋಲ್‌ತಾನ್‌ಗಳಿಗೆ ಮಹತ್ವ. ಆದರೆ ಕೆಲವೇ ಕೆಲವು ಘರಾಣೆಗಳಲ್ಲಿ ಬೋಲ್ ಆಕಾರ್ ಸ್ವರ ತಾನ್‌ಗಳು ಮೂರಕ್ಕೂ ಮಹತ್ವ. ಅಂಥ ಘರಾಣೆಗಳಲ್ಲಿ ಸಹಸ್ವಾನ್ ಘರಾಣೆಯೂ ಒಂದು. ಈ ಘರಾಣೆಯಲ್ಲಿ ರಶೀದ್ ಖಾನ್ ಅತ್ಯಂತ ಅಧಿಕಾರಯುತವಾಗಿ ಹಾಡುತ್ತಿದ್ದರು. ಹೀಗಾಗಿ ರಶೀದ್ ಖಾನ್ ಅವರ ಕಛೇರಿ ಎಂದರೆ ಕೇಳುಗರಿಗೆ ಎಲ್ಲಿಲ್ಲದ ಪ್ರೀತಿ.

ಅವರು ಹಾಡುತ್ತಿದ್ದ 'ತಿಹಾಯ್'ಗಳು ಬಹಳ ಕ್ಲಿಷ್ಟಕರವಾಗಿರುತ್ತಿದ್ದವು. ಲಯದಲ್ಲಿ ಅಗಾಧವಾದ ಹಿಡಿತ ಇತ್ತು. ಅನೇಕ ವಿದ್ವತ್‌ಪೂರ್ಣ ತಬಲಾ ಕಲಾವಿದರೇ ಇವರ ಗಾಯನದ ವೇಗಕ್ಕೆ ಲಯ ತಪ್ಪಿದ ಉದಾಹರಣೆಗಳೂ ಇವೆ.

## ಸಂಗೀತದಲ್ಲಿ 'ಸಾರ್ವಭೌಮತ್ವ'

ರಶೀದ್ ಖಾನ್ ಅವರು ಹಾಡುತ್ತಿದ್ದ ಶೈಲಿಯೇ ವಿಶಿಷ್ಟ. ಘಟಾನುಘಟಿ ಗಾಯಕರಾಗಿದ್ದ ಉಸ್ತಾದ್ ಅಮೀರ್ ಖಾನ್, ಉಸ್ತಾದ್ ಅಬ್ದುಲ್ ಕರೀಮ್ ಸಾಬ್ ಹಾಗೂ ಭೀಮಸೇನ ಜೋಶಿ ಅವರ ಶೈಲಿಗಳಿಂದ ಪ್ರಭಾವಿತರಾಗಿ ತಮ್ಮದೇ ಶೈಲಿಯನ್ನು ರೂಪಿಸಿಕೊಂಡು ಹಾಡುತ್ತಿದ್ದರು. ಹಿಂದೂಸ್ತಾನಿ ಸಂಗೀತಕ್ಕೆ ಹೊಸತನ ತಂದಿದ್ದರು ಎಂದು ನೆನಪಿಸಿಕೊಳ್ಳುತ್ತಾರೆ ಖ್ಯಾತ ಸಿತಾರ್ ವಾದಕ ಉಸ್ತಾದ್ ಶಫೀಕ್ ಖಾನ್.

ಅವರು ಸಹಸ್ವಾನ್ ಘರಾಣೆಯ ಪ್ರತಿಪಾದಕರಾಗಿದ್ದ ಇನಾಯಿತ್ ಹುಸೇನ್ ಖಾನ್ ಅವರ ಮೊಮ್ಮಗನಾಗಿದ್ದರಿಂದ ಸಂಗೀತ ಬೇಗನೆ ಒಲಿಯಿತು. ಅವರಿಂದ ಉತ್ತಮ ತಾಲೀಮೂ ದೊರೆಯಿತು. ಹೀಗಾಗಿ ರಶೀದ್ ಖಾನ್ ಸಂಗೀತದಲ್ಲಿ 'ಸಾರ್ವಭೌಮತ್ವ' ಸಾಧಿಸಲು ಸಹಕಾರಿಯಾಯಿತು ಎನ್ನುತ್ತಾರೆ ಅವರು.

'ಅವರೊಂದಿಗೆ ಎರಡು ಮೂರು ಸಂದರ್ಭಗಳಲ್ಲಿ ಸಾಕಷ್ಟು ಸಮಯ ಕಳೆದಿದ್ದೆ. ಅನೇಕ ಕಛೇರಿಗಳಿಗೆ ಹಾಜರಾಗಿದ್ದೆ, ಜೋಕ್ಸ್ ಮಾಡ್ತಿದ್ದರು. ನಗೋರು, ಲವ್ಲಿ ಮನುಷ್ಯ. ಎಲ್ಲರೊಂದಿಗೆ ಹೊಂದಿಕೊಂಡು ಹೋಗ್ತಿದ್ರು. ಯಾವಾಗಲೂ ಸಂಗೀತದ ಬಗ್ಗೆಯೇ ಚಿಂತನೆ ಮಾಡ್ತಿದ್ರು. ಏನು ಮಾತಾಡುವುದಿದ್ದರೂ ಸಂಗೀತದ ಬಗ್ಗೆಯೇ ಮಾತಾಡುತ್ತಿದ್ದರು' ಎಂದು ರಶೀದ್ ಅವರ ಸಂಗೀತದ ಒಲವನ್ನು ವಿವರಿಸುತ್ತಾರೆ ಶಫೀಖ್ ಖಾನ್.

ಪದ್ಮಶ್ರೀ, ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿ (2006), ಗ್ಲೋಬಲ್ ಇಂಡಿಯನ್ ಮ್ಯೂಸಿಕ್ ಅಕಾಡೆಮಿ ಪ್ರಶಸ್ತಿ (2010) ಬಂಗಾಳ ಭೂಷಣ್ (2012), ಪದ್ಮಭೂಷಣ (2022) ಪ್ರಶಸ್ತಿಗಳು ಇವರಿಗೆ ಲಭಿಸಿವೆ.

ಗಾಯನ ಜಗತ್ತಿನಲ್ಲಿ ಉತ್ತುಂಗದಲ್ಲಿದ್ದಾಗಲೇ ಕ್ಯಾನ್ಸರ್ ಬಾಧೆಯಿಂದಾಗಿ, ಸಾವು ಬದುಕಿನೊಂದಿಗೆ ಹೋರಾಟ ನಡೆಸಿದ ಉಸ್ತಾದ್‌ಜಿ, ಜನವರಿ 9ರಂದು ತಮ್ಮ 55ನೇ ವಯಸ್ಸಿಗೆ ಭೌತಿಕ ಬದುಕಿಗೆ ವಿದಾಯ ಹೇಳಬೇಕಾಯಿತು. ಸ್ವರ ತಾನ್‌ಗಳನ್ನು ವೇಗವಾಗಿ ಹಾಡಿ 'ಸಂ'ಗೆ ಬರುವಂತೆ ಜೀವನದಲ್ಲೂ ಬೇಗನೇ 'ಸಂ'ಗೆ ಬರುವಂತಾದದ್ದು ಸಂಗೀತಲೋಕಕ್ಕಾದ ನಷ್ಟ.

ಪ್ರತಿಕ್ರಿಯಿಸಿ: feedback@sudha.co.in

